ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಶ್ರೀ/ಶ್ರೀಮತಿ ಸಿ ಎನ್ ಮಂಜೇಗೌಡ ರವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ.

**ಸೂಚನೆ**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ಮಧುರೆ ಗ್ರಾಮದ ಸ.ನಂ.48 ರಲ್ಲಿ ಭೂ ಸಕ್ರಮೀಕರಣ ಸಮಿತಿಯಲ್ಲಿ ದಿನಾಂಕ:13.03.1972 ರಲ್ಲಿ ಸುಮಾರು 5 ಮಂದಿ ಭೂ ರೈತರಿಗೆ ಜಮೀನನ್ನು ಮಂಜೂರು ಮಾಡಿರುತ್ತಾರೆ ಇದರನ್ವಯ ಹಾಲಿ ಮಂಜೂರಿದಾರರು ಸಾಗುವಳಿ ಮಾಡುತ್ತಿದ್ದು, ಪ್ರಸ್ತುತ ಅನುಭವದಲ್ಲಿರುತ್ತಾರೆ. ಆದರೆ ದುರಸ್ಥಿಯಾದ ನಂತರ ಹೊಸ ನಂ 137 ಎಂದು ಪರಿವರ್ತಿಸಲಾಗಿದ್ದು, ಇದರಲ್ಲಿ ಕೆಲವು ವ್ಯಕ್ತಿಗಳಿಗೆ ಭೂ ಸಕ್ರಮೀಕರಣ ಸಮಿತಿಯಲ್ಲಿ ಜಮೀನು ಮಂಜೂರು ಮಾಡಿಲ್ಲದಿದ್ದರೂ ಸಹ ನಕಲಿ ದಾಖಲೆ ಸೃಷ್ಟಿಸಿ, ಮಾರಾಟ ಮಾಡಿರುವ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಇದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಸರ್ವೆಯರ್‌ಗಳ ಸಹ ಪದೇ ಪದೇ ಬಂದು ಗಡಿ ಕಲ್ಲುಗಳನ್ನು ಬದಲಾಯಿಸುವ ಉದ್ದೇಶವಾದರೂ ಏನು ಈ ಬಗ್ಗೆ ವಿವರವಾದ ತನಿಖೆ ಕೈಗೊಂಡಲ್ಲಿ ತಪ್ಪಿತಸ್ಥ ಅಧಿಕಾರಿಗಳನ್ನು ಪತ್ತೆ ಹಚ್ಚಲು ಸುಲಭವಾಗುತ್ತದೆ. ಹಾಗೂ ಈ ರೀತಿ ರಾಜ್ಯದಲ್ಲಾಗಿರುವ ಎಲ್ಲಾ ಅವ್ಯವಹಾರಗಳು ಬಯಲಾಗುತ್ತದೆ ಎಂಬ ವಿಷಯದ ಕುರಿತು ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಹೇಳಿಕೆ**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮಧುರೆ ಹೋಬಳಿ, ಮಧುರೆ ಗ್ರಾಮದ ಸ ನಂ 48 ಕ್ಕೆ ಸಂಬಂಧಿಸಿದಂತೆ ದರಖಾಸ್ತು ಮಂಜೂರಿ ಕಡತ ಸಂಖ್ಯೆ:ಎಲ್.ಎನ್.ಡಿ/ಎಸ್.ಆರ್/1578/1971-72 ರ ಕಡತವು ಲಭ್ಯವಿದ್ದು ಸದರಿ ಕಡತದಲ್ಲಿ ವೀರಣ್ಣ ಬಿನ್ ಮುನಿಶಾಮಯ್ಯ ರವರಿಗೆ 2-00 ಎಕರೆ, ಮಲ್ಲಯ್ಯ ಬಿನ್ ಅಪ್ಪಣ್ಣ ರವರಿಗೆ 3-00 ಎಕರೆ, ಶ್ರೀಮತಿ ಶಾರಧಮ್ಮ ಕೋಂ ಗಂಗಹುಚ್ಚಯ್ಯ 2-16 ಎ/ಗುಂಟೆ, ಲಕ್ಕಯ್ಯ ಬಿನ್ ನಂಜಪ್ಪ 3-00 ಎಕರೆ, ಆನೆಪ್ಪ ಬಿನ್ ನಂಜಯ್ಯ 2-00 ಎಕರೆ, ಬಸಪ್ಪ ಬಿನ್ ನಂಜಪ್ಪ 2-00 ಎಕರೆ ಯಂತೆ ಒಟ್ಟು 6 ಜನರಿಗೆ ಮಂಜೂರಿಯಾಗಿ ಸಾಗುವಳಿ ಚೀಟಿ ವಿತರಿಸಲಾಗಿದ್ದು ಕಡತದಲ್ಲಿ ದಾಖಲೆಗಳು ನೈಜ್ಯವಾಗಿರುತ್ತದೆ.

ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೊಡ್ಡಬಳ್ಳಾಪುರ ತಾಲ್ಲೂಕು ರವರ ವರದಿಯಂತೆ ಸ.ನಂ.48 ರಿಂದ ಪೋಡಿ ದುರಸ್ತಿಯಂತೆ ಹೊಸ ಸರ್ವೆ ನಂ 133 ರಿಂದ 137 ರವರೆಗೆ ಪೋಡಿ ದುರಸ್ತಿಯಾಗಿದ್ದು ಎಲ್.ಆರ್ ಟಿಪ್ಪಣಿ ಮತ್ತು ಆಕಾರ್ ಬಂದ್ ನೊಂದಿಗೆ ವರದಿ ಸಲ್ಲಿಸಿರುತ್ತಾರೆ. ಸದರಿಯವರ ವರದಿಯಂತೆ ಪಹಣಿ ಇಂಡೀಕರಣ ಮಾಡುವಾಗ ಕೈಬರಹದ ಪಹಣಿಯಲ್ಲಿ ಖಾತೆದಾರರಿಗೆ ಖಾತೆ ಪಹಣಿ ದಾಖಲಿಸುವಲ್ಲಿ ಸರ್ವೆ ನಂಬರ್‌ಗಳು ವ್ಯತ್ಯಾಸವಾಗಿರುವುದು ಪಹಣಿ ಪರಿಶೀಲನೆಯಂತೆ ಕಂಡುಬಂದಿರುತ್ತದೆ.

| ಮೂಲ ಸರ್ವೆ ನಂ | ಹೊಸ ಸರ್ವೆ ನಂಬರ್ | ಖರ್ದಾದಂತೆ ಖಾತೆದಾರರ ಹೆಸರು | ಮಂಜೂರಿಯಂತೆ ವಿಸ್ತೀರ್ಣ | ಪೋಡಿ ಯಂತೆ ವಿಸ್ತೀರ್ಣ | ಪಹಣಿ ಇಂಡೀಕರಣ ದಂತೆ ಖಾತೆದಾರರ ಹೆಸರು |
|---|---|---|---|---|---|
| 48 | 133 | ಬಸಪ್ಪ ಬಿನ್ ನಂಜಯ್ಯ | 2-00 | 2-00 | ಬಸಪ್ಪ ಬಿನ್ ನಂಜಯ್ |

| | | | | | |
|---|---|---|---|---|---|
| 48 | 134 | ಲಕ್ಷ್ಮಯ್ಯ ಬಿನ್ ನಂಜಯ್ಯ | 3-00 | 3-00 | ಲಕ್ಷ್ಮಯ್ಯ ಬಿನ್ ನಂಜಯ್ಯ |
| 48 | 135 | ಆನೆಪ್ಪ ಬಿನ್ ನಂಜಯ್ಯ | 2-00 | 2-00 | ಆನೆಪ್ಪ ಬಿನ್ ನಂಜಯ್ಯ |
| 48 | 136 | ವೀರಣ್ಣ ಬಿನ್ ಮುನಿಶಾಮಯ್ಯ | 2-00 | 2-00 | ಲಕ್ಷ್ಮಯ್ಯ ಬಿನ್ ನಂಜಯ್ಯ |
| 48 | 137 | ಶಾರಧಮ್ಮ ಕೋಂ ಗಂಗಹುಚ್ಚಯ್ಯ | 2-16 | 2-16 | ವೀರಣ್ಣ ಬಿನ್ ಮುನಿಶಾಮಯ್ಯ |
| 48/ಪಿ1 | - | - | 2-00 | - | ಮಲ್ಲಯ್ಯ ಬಿನ್ ಅಪ್ಪಯ್ಯ |
| 48/ಪಿ1 | - | - | 2-16 | - | ಶಾರಧಮ್ಮ ಕೋಂ ಗಂಗಹುಚ್ಚಯ್ಯ |

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಪಹಣ ಇಂಡೀಕರಣದ ಸಮಯದಲ್ಲಿ ಖಾತೆದಾರರ ಹೆಸರು ದಾಖಲಿಸಿರುವುದು ತಪ್ಪಾಗಿರುವುದು ಮೂಲ ಕೈಬರಹದ ಪಹಣಿ 1997-98 ರಿಂದ 2000-01 ರ ವರೆಗೆ ವಹಿಯಲ್ಲಿ ಕಂಡುಬಂದಿರುತ್ತದೆ ತದನಂತರ ಗಣಕೀಕೃತ ಪಹಣಿಯಲ್ಲಿಯೂ ಸಹ ಖಾತೆ ಮುಂದುವರೆದಿದ್ದು ಕ್ರಯದ ವಹಿವಾಟುಗಳಂತೆ ಚಾಲ್ತಿ ಖಾತೆದಾರರಿಗೆ ಖಾತೆದಾಖಲಿರುವುದು ಕಂಡುಬಂದಿರುತ್ತದೆ.

ಪಹಣಿ ಇಂಡೀಕರಣ ಸಮಯದಲ್ಲಿ ಮಂಜೂರಿಯಂತೆ ಲಕ್ಷ್ಮಯ್ಯ ಬಿನ್ ನಂಜಯ್ಯ ರವರಿಗೆ 3-00 ಎಕರೆ ಮಂಜೂರಿಯಾಗಿ ಹೊಸ ಸ ನಂ 134 ಕ್ಕೆ ದುರಸ್ತಿಯಾಗಿದ್ದು ಇಂಡೀಕರಣದ ಸಮಯದಲ್ಲಿ ಸ ನಂ 134 ರಲ್ಲಿ 3-00 ಎಕರೆ ಮತ್ತು ಸ ನಂ 136 2-00 ಎಕರೆ ಎರಡು ಪಹಣಿಗಳು 1974 ನೇ ಸಾಲಿನ ದಿನಾಂಕ:05/03/1974 ರಲ್ಲಿ ಇಂಡೀಕರವಾಗಿರುವದು ತಪ್ಪಾಗಿರುತ್ತದೆ.

ಅದೇ ರೀತಿ ವೀರಣ್ಣ ಬಿನ್ ಮುನಿಶಾಮಯ್ಯ ರವರಿಗೆ 2-00 ಎಕರೆ ಮಂಜೂರಿಯಾಗಿ ಹೊಸ ಸ.ನಂ.136 ಎಂದು ದುರಸ್ತಿಯಾಗಿದ್ದು 1974ನೇ ಸಾಲಿನಲ್ಲಿ ಪಹಣಿ ಇಂಡಿಕರಣಮಾಡುವಾಗ ಸ.ನಂ.137ಕ್ಕೆ 2-16 ಎ/ಗುಂಟೆಗೆ ಎಂದು ತಪ್ಪಾಗಿ ಪಹಣಿಯಲ್ಲಿ ಇಂಡೀಕರಣವಾಗಿರುತ್ತದೆ. ಹಾಗೂ ದುರಸ್ತಿಯಂತೆ ಸ.ನಂ.137ರ ಖಾತೆದಾರರಾದ ಶಾರಧಮ್ಮ ಕೋಂ ಗಂಗಹುಚ್ಚಯ್ಯ ರವರಿಗೆ ಪಹಣಿ ಇಂಡೀಕರಣವಾಗದೆ ಸ.ನಂ.48ರಲ್ಲಿ ಮುಂದುವರೆದಿರುತ್ತದೆ. ಆದ್ದರಿಂದ ಪಹಣಿ ಇಂಡೀಕರಣ ಸಮಯದಲ್ಲಿ ಆಗಿರುವ ವ್ಯತ್ಯಾಸವನ್ನು ಪೋಡಿ ದಾಖಲೆಗಳಂತೆ ಹಾಗೂ ಚಾಲ್ತಿ ಖಾತೆದಾರರಿಗೆ ಹಕ್ಕು ಬದಲಾಣೆ ಆಗಿರುವ ಬಗ್ಗೆ ದಾಖಲೆಗಳಂತೆ ತಿದ್ದುಪಡಿ ಮಡಲು ಮಾನ್ಯ ಉಪ ವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿ ಇಂಡೀಕರಣ ಸಮಯದಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಆರ್‌ಡಿ 28 ಎಲ್‌ಜಿಕ್ಯೂ 2024 (ಇ)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು